# ಕನ್ನಡಿಗರ ಭಾವುಕತೆಗೆ ಭವ್ಯಸಾಕ್ಷಿ : ಪಟ್ಟದಕಲ್ಲು-ಐಹೊಳೆ

❑ ಸರಸ್ವತಿ ವಿಜಯನಾರಸಿಂಹ

**ಪಟ್ಟದಕಲ್ಲು ಚಾಲುಕ್ಯರ ಕಾಲದಲ್ಲಿ ಧರ್ಮಸಂಸ್ಕೃತಿಗಳನ್ನು ಬಿತ್ತರಿಸುವ ಧರ್ಮಪೀಠವಾಗಿದ್ದು, ಚಾಲುಕ್ಯಶಿಲ್ಪದ ಶ್ರೀಮಂತ ಆಕರವಾಗಿದೆ. ಸುಂದರ ದೇವಾಲಯಗಳಿಗೆ ಹೆಸರಾಗಿರುವ ಪಟ್ಟದಕಲ್ಲು ಮತ್ತು ಐಹೊಳೆಗಳ ಒಂದು ಸೂಕ್ಷ್ಮ ಪರಿಚಯವನ್ನು ಮಾಡಿಕೊಟ್ಟಿರುವ ಶ್ರೀಮತಿ ಸರಸ್ವತಿ ಅವರು ಖ್ಯಾತ ಚಲನಚಿತ್ರಸಾಹಿತಿಗಳೂ ರಾಷ್ಟ್ರಪ್ರಶಸ್ತಿ ವಿಜೇತರೂ ಆಗಿದ್ದ ದಿವಂಗತ ಶ್ರೀ ವಿಜಯನಾರಸಿಂಹರ ಧರ್ಮಪತ್ನಿ.**

ಯುಗಯುಗಗಳಿಂದಲೂ ಮಾನವ ದೈವಶಕ್ತಿಗೆ ಶರಣಾಗುತ್ತಲೇ ಬರುತ್ತಿದ್ದಾನೆ. ರಾಜ ಮಹಾರಾಜರಾಗಲಿ, ದೀನದಲಿತರಾಗಲಿ, ತಮ್ಮ ದಿನನಿತ್ಯದ ಬವಣೆಗಳ ನಡುವೆ ಅವ್ಯಕ್ತಶಕ್ತಿಗೆ ಕೈಮುಗಿದು ಪ್ರಾರ್ಥನೆ ಮಾಡುವುದನ್ನು ನೋಡುತ್ತಲೇ ಇದ್ದೇವೆ. ಆ ಶಕ್ತಿಯ ಸ್ಮರಣೆ ಅವ್ಯಕ್ತ ಆನಂದವನ್ನುಂಟುಮಾಡುತ್ತದೆ, ಅವರ್ಣನೀಯ ಭಾವುಕತೆಯಿಂದ ಮೈಮನ ಪುಲಕಿತವಾಗುತ್ತವೆ.

ಧ್ಯೇಯಜೀವಿಯಾದವನು ತನ್ನ ಉಸಿರಿನ ಪ್ರತಿ ಎಣಿಕೆಯಲ್ಲೂ ಆ ದೈವವನ್ನು ಸ್ಮರಿಸುತ್ತಾನೆ. ಭಕ್ತಿಭಾವವನ್ನು ಕಲೋಪಾಸನೆಯ ಮೂಲಕವೋ ನಾದೋಪಾಸನೆಯ ಮೂಲಕವೋ ಹೊರಗೆಡಹುತ್ತಾನೆ. ಹೃನ್ಮನಗಳ ತಲ್ಲೀನತೆಯಿಂದ ಹೊರಬಂದ ಭಾವ ಮತ್ತೊಂದು ಹೃದಯವನ್ನು ತನ್ನತ್ತ ಸೆಳೆಯುತ್ತದೆ.

ಸುಸಂಸ್ಕೃತ ಕಲಾವಿದನ ಜೀವವು ಭಕ್ತಿಯ ಆಗರವಾಗುತ್ತದೆ, ಪರಿಪಕ್ವತೆಯನ್ನು ಪಡೆದು ಸಾರ್ಥಕತೆಯನ್ನು ಹೊಂದುತ್ತದೆ. ಶಿಲ್ಪಕಲೆ ಮಾನವನ ಭಾವುಕತೆಗೆ ಭವ್ಯಸಾಕ್ಷಿ, ಅಮರತ್ವಕ್ಕೊಯ್ಯುವ ದಿವ್ಯಸಾಧನ. ಉಳಿಪೆಟ್ಟಿನಿಂದ ದೇವಮೂರ್ತಿಗಳಾಗಿ ಮಾರ್ಪಡುವ ಕಾಡುಕಲ್ಲು ಭಾವುಕ ಹೃದಯಗಳನ್ನು ತನ್ನತ್ತ ಸೆಳೆಯುತ್ತದೆ.

ಕನ್ನಡಿಗರು ಶತಶತಮಾನಗಳಿಂದಲೂ ಭಾವುಕತೆಗೆ ಹೆಸರಾದವರು. ಗಂಗ, ಕದಂಬ, ಹೊಯ್ಸಳ, ಚಾಲುಕ್ಯ, ರಾಷ್ಟ್ರಕೂಟ—ರಾಜರ ದೈವಭಕ್ತಿಯ ಪ್ರತೀಕಗಳಾಗಿ, ಭಾವುಕತೆಯ ಕನ್ನಡಿಗಳಾಗಿವೆ, ಪಟ್ಟದಕಲ್ಲು ಮತ್ತು ಐಹೊಳೆಯ ಭವ್ಯ ದೇವಾಲಯಗಳು. ಈಗ ಭಗ್ನಾವಶೇಷಗಳಾಗಿದ್ದರೂ ಹಿಂದೊಮ್ಮೆ ವೈಭವದಿಂದ ಮೆರೆದ ಸಾಕ್ಷಿಗಳಾಗಿ ತನ್ನತ್ತ ನೋಡುಗರನ್ನು ಸೆಳೆಯುತ್ತದೆ ಇಲ್ಲಿನ ಶಿಲ್ಪಕಲೆ. ಜೈನ, ಬೌದ್ಧ, ಹಿಂದೂಧರ್ಮಗಳ ಸಮಾಗಮವನ್ನು ಇಲ್ಲಿನ ಶಿಲ್ಪಗಳಲ್ಲಿ ಕಾಣುತ್ತೇವೆ. ಭಾವುಕನಾದವನು ಭಕ್ತಿಯಿಂದ ಆ ಶಿಲ್ಪಕಲೆಗೆ ಕೈಮುಗಿದು ಇತಿಹಾಸವನ್ನೊಮ್ಮೆ ನೆನೆದು ತನ್ನನ್ನು ಸ್ವಲ್ಪ ಹೊತ್ತು ಮರೆಯುತ್ತಾನೆ.

## ಪಟ್ಟದಕಲ್ಲು

ಬಾದಾಮಿಯಿಂದ ೨೨ ಕಿ.ಮೀ. ದೂರದಲ್ಲಿದೆ ಈ ಚಿಕ್ಕ ಗ್ರಾಮ. ಮಲಪ್ರಭಾ ನದಿಯ ದಂಡೆಯ ಮೇಲಿದೆ. ಇಲ್ಲಿಗೆ ತಲುಪಲು ಉತ್ತಮ ಸಾರಿಗೆ ವ್ಯವಸ್ಥೆ ಇದೆ. ಇದು ಚಾಲುಕ್ಯರ ಕಾಲದ ದೇವಾಲಯಗಳಿಂದ ಪ್ರಾಮುಖ್ಯತೆಯನ್ನು ಪಡೆದಿದೆ. ಅನೇಕ ರಾಜ ಮಹಾರಾಜರ ಆಸ್ತಿಕ ಮನೋಭಾವದ ಕಥೆ ಹೇಳುವ ಈ ಪಟ್ಟದಕಲ್ಲು ಸಾತವಾಹನರ ಕಾಲದ ಅವಶೇಷಗಳನ್ನೂ ತನ್ನಲ್ಲಿ ಹುದುಗಿಸಿಕೊಂಡಿದೆ. ಹಿಂದೆ 'ಪೆತಗರ್ತ' ಎಂದು ಸುಪ್ರಸಿದ್ಧವಾಗಿದ್ದ ಈ ವ್ಯಾಪಾರಿ ಕೇಂದ್ರವನ್ನು ಗ್ರೀಕ್ ಭೂಗೋಳಕಾರ ೭ನೆಯ ಶತಮಾನದ್ದೆಂದು ಉಲ್ಲೇಖಿಸಿದ್ದಾನೆ. ಚಾಲುಕ್ಯ ಸಾಮ್ರಾಟರು ಇಲ್ಲಿ ತಮ್ಮ ಪಟ್ಟಬಂಧ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದ್ದರೆಂದು 'ಸಿಂಗಿರಾಜಪುರಾಣ' ಮತ್ತು 'ಹಮ್ಮೀರ ಕಾವ್ಯ'ಗಳು ವರ್ಣಿಸಿ ಹೇಳುತ್ತವೆ. ನದಿಯ ದಂಡೆಯ ಎತ್ತರವಾದ ಬಯಲಿನಲ್ಲಿ ದೊರಕಿರುವ ಕಲ್ಲಿನ ಕಂಬಗಳೂ ಮಣ್ಣಿನ ಪಾತ್ರೆಗಳೂ ಇದಕ್ಕೆ ಸಾಕ್ಷಿ ಹೇಳುತ್ತಿವೆ. ಈ ಎತ್ತರವಾದ ಬಯಲು ಪ್ರದೇಶವೇ ಹಿಂದೆ ರಾಜರು ಪಟ್ಟಾಭಿಷಿಕ್ತರಾಗುತ್ತಿದ್ದ ಸಭಾಮಂಟಪವೆಂದು ಸ್ಪಷ್ಟಪಡಿಸುತ್ತದೆ.


೧೧೬೨ರ ಶಾಸನವೊಂದು ಈ 'ಕಿಸುವೊಳಲ್' ಪಟ್ಟಣವನ್ನು ದಕ್ಷಿಣಕಾಶಿ ಎಂದೂ ಹೇಳಿದೆ. ರಕ್ತಪುರ ಎಂಬ ಅಭಿದಾನದಿಂದ ರಾಜಧಾನಿಯಾಗಿ ಮೆರೆಯುತ್ತಿತ್ತು ಎಂದೂ ತಿಳಿಸುತ್ತದೆ ಈ ಶಾಸನ. ವಿರೂಪಾಕ್ಷ ದೇವಾಲಯದ ಮುಖಮಂಟಪದಲ್ಲಿ ದೊರೆತಿರುವ ಶಾಸನವೊಂದು ರಾಷ್ಟ್ರಕೂಟ ಕಲಿವಲ್ಲಭನ ಕಾಲದಲ್ಲಿ ಈ ಪಟ್ಟದಕಲ್ಲು ಪ್ರಸಿದ್ಧವಾಗಿತ್ತೆಂಬುದನ್ನು ನಿರೂಪಿಸುತ್ತದೆ. ಅಂದಿನ ರಾಜಮಾಂಡಳಿಕರು ದೇವಸ್ಥಾನಗಳಿಗೆ ಹೇರಳ ದತ್ತಿ ಕೊಟ್ಟರೆಂಬುದನ್ನು ತಿಳಿಸುತ್ತದೆ. ಚಾವುಂಡರಾಯ ಎಂಬ ಮಹಾ ಮಂಡಲೇಶನ ಪತ್ನಿ ಧೇಮಲದೇವಿ ಕಾಶಿವಿಶ್ವೇಶ್ವರನಿಗೆ ಸಮನೆನಿಸಿದ 'ವಿಜಯೇಶ್ವರ' ದೇವಾಲಯವನ್ನು ಇಲ್ಲಿ ನಿರ್ಮಿಸಿ ೩೦೦ ಮತ್ತರು ಭೂಮಿಯನ್ನು ದತ್ತಿ ಬಿಟ್ಟಿದ್ದಳೆಂದೂ ತಿಳಿದು ಬರುತ್ತದೆ.

ದ್ರಾವಿಡ ಮತ್ತು ನಾಗರ ಶೈಲಿಯ ಅನುಪಮ ಸೌಂದರ್ಯದಿಂದ ಕಂಗೊಳಿಸುವ ಹತ್ತು ದೇವಾಲಯಗಳನ್ನು ಇಲ್ಲಿ ಕಾಣುತ್ತೇವೆ. ಇಮ್ಮಡಿ ವಿಕ್ರಮಾದಿತ್ಯ ೭೩೩-೭೪೫ರಲ್ಲಿ ಕಂಚಿ ಪಟ್ಟಣವನ್ನು ಮೂರು ಬಾರಿ ಆಕ್ರಮಿಸಿ ಗೆದ್ದ ನೆನಪಿಗಾಗಿ ಆತನ ಪಟ್ಟಮಹಿಷಿ 'ಲೋಕಮಹಾದೇವಿ' ಇಲ್ಲಿನ ವಿರೂಪಾಕ್ಷ ದೇವಾಲಯವನ್ನು ಕಟ್ಟಿಸಿದಳೆಂದು ತಿಳಿದುಬರುತ್ತದೆ. ಅಂದಿನ ದಿನಗಳಲ್ಲಿ ಈ ವಿರೂಪಾಕ್ಷನನ್ನೇ ಲೋಕಪಾಲೇಶ್ವರ ಅಥವಾ ಲೋಕೇಶ್ವರ ಎಂದೂ ಸಂಬೋಧಿಸಿ ವೈಭವವಾಗಿ ಪೂಜೆ ಮತ್ತು ಅನೇಕ ವಿಧದ ಕೈಂಕರ್ಯಗಳನ್ನು ಸಲ್ಲಿಸುತ್ತಿದ್ದರು. ಈ ದೇವಾಲಯ ಬಹು ಸುಂದರವೂ ವಿಶಾಲವೂ ಆಗಿದೆ.

೬೭ ಮೀ. ಉದ್ದ ಮತ್ತು ೩೨ ಮೀ. ಅಗಲದ ಪ್ರಾಕಾರವಿದೆ. ಮಧ್ಯದಲ್ಲಿ ದೇವಾಲಯದ ಮೂಲ ಘಟಕವಿದೆ. ಪೂರ್ವ ಮತ್ತು ಪಶ್ಚಿಮಗಳಲ್ಲಿ ಪ್ರವೇಶದ್ವಾರಗಳಿವೆ. ಸುತ್ತಲೂ ಚಿಕ್ಕ ಚಿಕ್ಕ ಗುಡಿಗಳಿವೆ. ಪೂರ್ವದ ದಾರಿ ನದಿಯವರೆಗೂ ಸಾಗುತ್ತದೆ. ಅಲ್ಲಲ್ಲಿ ತಂಗುದಾಣಗಳಿವೆ. ದೇವಾಲಯದ ಒಳಗೆ ಒಂದು ನಂದಿ

ಮಂಟಪವಿದೆ. ೭.೫ ಉದ್ದಗಲವಾದ ಸಮಚತುರ್ಭುಜಾಕಾರದ ತಳವಿನ್ಯಾಸದ ಮಂಟಪದಲ್ಲಿ ಎರಡೂವರೆ ಮೀಟರ್ ಎತ್ತರದ ಜಗುಲಿಯ ಮೇಲೆ ದೊಡ್ಡ ದುಂಡಗಿನ ಕಂಬಗಳು ಛಾವಣಿಯನ್ನು ಹೊತ್ತು ನಿಂತಿವೆ. ಜಗುಲಿಯ ಸುತ್ತಲೂ ನಾನಾ ಭಂಗಿಯ ಆನೆಗಳ ಮತ್ತು ಕುಬ್ಜರ ಶಿಲ್ಪಗಳು ಕಡೆಯಲ್ಪಟ್ಟಿವೆ. ಕಮಲಪಾಣಿಯಾದ ಸ್ತ್ರೀ, ಅಂಕುಶವನ್ನು ಹಿಡಿದಿರುವ ಇಂದ್ರಾಣಿ, ಶುಕ ಭಾಷಿಣಿ—ಇವೇ ಮೊದಲಾದ ಶಿಲ್ಪಗಳೂ ಸುಂದರವಾಗಿ ನಿರ್ಮಿತವಾಗಿವೆ. ನಂದಿಮಂಟಪದಿಂದ ೫ ಕಿ.ಮೀ. ದೂರದಲ್ಲಿ ದೇವಾಲಯದ ಮೂಲ ಘಟಕವಿದೆ. ಗರ್ಭಗುಡಿಯು ಪ್ರದಕ್ಷಿಣಾ ಪಥದಿಂದ ಆವೃತವಾಗಿದೆ. ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಮುಖ ಮಂಟಪಗಳಿವೆ. ಇವನ್ನು ಏರಲು ಪಾವಟಿಗೆಗಳಿವೆ. ಪಾವಟಿಗೆಯ ಮಂಟಪವನ್ನು ಆನೆ ಮತ್ತು ಸಿಂಹಗಳ ಶಿಲ್ಪಗಳೇ ಹೊತ್ತು ಸುತ್ತುವರಿದು ನಿಂತಿವೆ. ಮುಖಮಂಟಪದಲ್ಲಿ ಸೂರ್ಯ, ದ್ವಾರಪಾಲಕರು, ಶಂಖನಿಧಿ ಮತ್ತು ಪದ್ಮನಿಧಿಯ ಚಿತ್ರಗಳು ಕಣ್ಮನಗಳನ್ನು ಸೆಳೆಯುತ್ತವೆ. ವಿಜಯಾದಿತ್ಯ ಮತ್ತು ಲೋಕಮಹಾದೇವಿ ಈ ದೇವಾಲಯಕ್ಕೆ ಬಿಟ್ಟ ದತ್ತಿಗಳ ಶಾಸನಗಳಿವೆ. ಮೋಡದಲ್ಲಿ ಚಲಿಸುವ ಸೂರ್ಯನ ರಥವಿರುವ ಚಿತ್ರ ಚಿತ್ತಾಕರ್ಷಕವಾಗಿದೆ. ದಕ್ಷಿಣಮುಖ ಮಂಟಪದಲ್ಲಿ ನೃಸಿಂಹ ಹಿರಣ್ಯಕಶಿಪು ದ್ವಂದ್ವಯುದ್ಧ, ರಾವಣ ಕೈಲಾಸವನ್ನು ಎತ್ತುತ್ತಿರುವ ಶಿಲ್ಪಗಳು ಅದ್ವಿತೀಯವಾಗಿವೆ. ಉತ್ತರದಲ್ಲಿ ಗಜೇಂದ್ರಮೋಕ್ಷದ ಕಥೆ ಕೆತ್ತಲ್ಪಟ್ಟಿದೆ. ನಾಗರಬಾಲಗಳನ್ನು ಹಿಡಿದು ಹಾರುತ್ತಿರುವ ಗರುಡಶಿಲ್ಪ ಮತ್ತು ಗಂಗಾಯಮುನೆಯರ ಚಿತ್ರಗಳು ನೋಡುಗರನ್ನು ಸೆರೆಹಿಡಿಯುತ್ತವೆ. ವಿಶಾಲವಾದ ಸಭಾಮಂಟಪದಲ್ಲಿ ರಾಮಾಯಣ ಮಹಾಭಾರತ ಮತ್ತು ಭಾಗವತದ ದೃಶ್ಯಗಳು ಕೆತ್ತಲ್ಪಟ್ಟಿವೆ. ಮಹಿಷಮರ್ದಿನಿಯ ಚಿತ್ರವನ್ನು ಪ್ರದಕ್ಷಿಣಾಪಥದ ಗೋಡೆಯಲ್ಲಿ ಕಡೆಯಲಾಗಿದೆ. ಅಲ್ಲಿನ ಅನೇಕ ಕಂಬಗಳು ಪೌರಾಣಿಕ ಚಿತ್ರಗಳೊಂದಿಗೆ ಅಂದಿನ ಸಾಮಾಜಿಕ ಜೀವನವನ್ನು ಬಿಂಬಿಸುವ ಚಿತ್ರಗಳು ಸೊಗಸಾಗಿ ಮೂಡಿಬಂದಿವೆ. ಅಲ್ಲಲ್ಲಿರುವ ಜಾಲಂಧ್ರಗಳ ನಸುಬೆಳಕು ವಿಗ್ರಹಗಳ ಅವಲೋಕನಕ್ಕೆ ಅನುವು ಮಾಡಿಕೊಡುತ್ತದೆ. ಭಿತ್ತಿಭಾಗದ ಮಟ್ಟ ಪ್ರದೇಶದಲ್ಲಿರುವ ಕೋಷ್ಠಗಳಲ್ಲಿ ಲಿಂಗೋದ್ಭವ ಶಿವ, ಅಷ್ಟಭುಜ ಶಿವ, ನಟರಾಜ, ನೃಸಿಂಹ, ಸೀತಾಪಹರಣ, ಹರಿಹರ ಮತ್ತು ಜನಾರ್ದನ ಶಿಲ್ಪಗಳು ಮನೋಹರವಾಗಿ ಕಡೆಯಲ್ಪಟ್ಟಿವೆ. ಗರ್ಭಗುಡಿಯ ಮೇಲೆ ತ್ರಿಕಳಶ ಶಿಖರವಿದೆ. ಇದು ದ್ರಾವಿಡ ಮಾದರಿಯ ಶಿಲ್ಪ. ಚೌಕಾಕಾರದ ದಪ್ಪ ಸ್ತೂಪ ಮತ್ತು ಕಳಶವನ್ನು ಇಲ್ಲಿ ಬಿಂಬಿಸಲಾಗಿದೆ.

ವಾಸ್ತುಶಿಲ್ಪ ಇತಿಹಾಸದಲ್ಲಿಯೇ ಪಟ್ಟದಕಲ್ಲಿನ ಈ ವಿರೂಪಾಕ್ಷ ದೇವಾಲಯ ವಿಶಿಷ್ಟಸ್ಥಾನ ಪಡೆದಿದೆ. ಚಾಳುಕ್ಯರ ಕಾಲದ ದೇವಾಲಯಗಳಲ್ಲಿಯೇ ಇದು ಅತಿ ದೊಡ್ಡದು ಮತ್ತು ಸಕಲಾಂಗ ಪರಿಪೂರ್ಣವಾದುದು. ಈ ದೇವಾಲಯವನ್ನು ನಿರ್ಮಿಸಿದ ಶಿಲ್ಪಿಗಳಾದ ಸರ್ವಸಿದ್ಧಿ ಆಚಾರಿ, ಚೆಂಗಮ್ಮ ಮತ್ತು ಬಲದೇವ ಮೊದಲಾದ ಆಚಾರಿಗಳ ಹೆಸರನ್ನು ಇಲ್ಲಿ ಉಲ್ಲೇಖಿಸಿದೆ.



ವಿರೂಪಾಕ್ಷದೇವಾಲಯ, ಪಟ್ಟದ ಕಲ್ಲು

ಇಮ್ಮಡಿ ವಿಕ್ರಮಾದಿತ್ಯನ ಕಿರಿಯ ರಾಣಿ ನಿರ್ಮಿಸಿದ ಮಲ್ಲಿಕಾರ್ಜುನ ದೇವಾಲಯ ವಿರೂಪಾಕ್ಷ ದೇವಾಲಯದಷ್ಟು ದೊಡ್ಡದಲ್ಲವಾದರೂ ಬಹಳಷ್ಟು ಆ ದೇವಾಲಯವನ್ನೇ ಹೋಲುತ್ತದೆ. ಮಲ್ಲಿಕಾರ್ಜುನ ದೇವಾಲಯದ ನಂದಿಮಂಟಪ ಮತ್ತು ಸ್ತೂಪಗಳು ಅಲ್ಲಲ್ಲಿ ಹಾಳಾಗುತ್ತಿವೆ. ಸಭಾಮಂಟಪದಲ್ಲಿ ಗರುಡವಾಹನ ವಿಷ್ಣುವಿನ ಶಿಲ್ಪವಿದೆ. ಕಂಬಗಳಲ್ಲಿ ರಾಮಾಯಣ ಮಹಾಭಾರತ ಮತ್ತು ಪಂಚತಂತ್ರದ ಚಿತ್ರಗಳು ರಚನೆಯಾಗಿವೆ. ಮೇಲ್ಛಾವಣಿಯಲ್ಲಿ ನಂದಿಯ ಮೇಲಿರುವ ಪಾರ್ವತಿ ಪರಮೇಶ್ವರರ ಶಿಲ್ಪಗಳು ಕಡೆಯಲ್ಪಟ್ಟಿವೆ. ಸಂಗಮೇಶ್ವರ ದೇವಾಲಯ ಇನ್ನೂ ಪುರಾತನವಾದುದೆಂದು ಶಾಸನಗಳು ಹೇಳುತ್ತವೆ. ಗರ್ಭಗೃಹದಲ್ಲಿ ಕರಿಶಿಲೆಯ ವಿಗ್ರಹವಿದೆ. ದ್ವಾರದ ಇಬ್ಬದಿಯಲ್ಲಿ ನಂದಿ ಮತ್ತು ವೀರಭದ್ರರ ವಿಗ್ರಹಗಳಿವೆ. ಗರ್ಭಗುಡಿಯ ಹೊರಭಾಗದಲ್ಲಿ ನಟರಾಜ ಮತ್ತು ಗಜಾಸುರಮರ್ದನದ ಶಿಲ್ಪಗಳಿವೆ. ಸಭಾಮಂಟಪ ವಿಶಾಲವಾಗಿದ್ದು ೨೦ ಕಂಬಗಳಿಂದ ಕೂಡಿದೆ. ಗೋಡೆಗೆ ಮೂರರಂತೆ ಅನೇಕ ಜಾಲಂಧ್ರಗಳಿವೆ. ಪೂರ್ವದಲ್ಲಿ ಕೆತ್ತಲ್ಪಟ್ಟಿರುವ ಉಗ್ರನರಸಿಂಹ ವಿಗ್ರಹ ಅಪೂರ್ಣವಾಗಿದೆ. ದೇವಾಲಯದ ಭಿತ್ತಿಯಲ್ಲಿ ಅರ್ಧನಾರೀಶ್ವರ, ಭೃಂಗಿ, ವಿಷ್ಣು, ಭೂವರಾಹ ಮತ್ತು ಅಂಧಕಾಸುರರ ಶಿಲ್ಪಗಳಿವೆ.

ವಿರೂಪಾಕ್ಷ ಗುಡಿಯಿಂದ ಉತ್ತರ ಭಾಗಕ್ಕೆ ಗಳಗನಾಥ ದೇವಾಲಯವಿದೆ. ೧೨೦ ಮೀ. ವಿಸ್ತೀರ್ಣವಿದೆ ಈ ದೇವಾಲಯ. ಈ ದೇವಾಲಯಕ್ಕೆ ಹಿಂಬದಿಯಲ್ಲಿಯೇ ಜಂಬುಲಿಂಗೇಶನ ದೇವಾಲಯವಿದೆ. ಗರ್ಭಗೃಹದ ಶಿವಲಿಂಗದ ಮೇಲೆ ನಾಗರ ರೇಖಾ ಶಿಖರಗಳು ಬಿಡಿಸಲ್ಪಟ್ಟಿರುವುದು ಈ ದೇವಾಲಯದ ವಾಸ್ತು ವೈಶಿಷ್ಟ್ಯ. ಜಂಬುಲಿಂಗೇಶ್ವರನ ಹತ್ತಿರದಲ್ಲೇ ಕಾಡು ಸಿದ್ದೇಶ್ವರನ ದೇವಾಲಯ. ಗರ್ಭಗೃಹದ ವಿಗ್ರಹದ ಮೇಲೆ ಬ್ರಹ್ಮ ಮತ್ತು ವಿಷ್ಣುವಿನ ವಿಗ್ರಹಗಳೂ ಲಲಾಟದ ಮೇಲೆ ಪಾರ್ವತಿ ಪರಮೇಶ್ವರರ ವಿಗ್ರಹಗಳೂ ಇವೆ. ನಾಗರಪ್ರಾಸಾದ ಶಿಖರವಿರುವ ಇನ್ನೊಂದು ಗುಡಿ ಕಾಶಿವಿಶ್ವೇಶ್ವರ. ಅಷ್ಟದಿಕ್ಪಾಲರಿಂದ ಒಡಗೂಡಿದ ಸೋಮಸ್ಕಂಧ ವಿಗ್ರಹ ಈ ದೇವಾಲಯದ ಭಿತ್ತಿನಲ್ಲಿದೆ.

ಇದೇ ಇಲ್ಲಿಯ ವಿಶೇಷ. ಪಾಪನಾಥ ದೇವಾಲಯ ವಾಸ್ತುಶಿಲ್ಪ ದೃಷ್ಟಿಯಿಂದ ವಿಶಿಷ್ಟವಾಗಿದೆ. ರಾಜನೊಬ್ಬ ಸಾಮಂತರೊಡಗೂಡಿ ಪತ್ನೀಸಮೇತನಾಗಿ ಕುಳಿತಿರುವ ಚಿತ್ರಣ ಅದ್ವಿತೀಯವಾಗಿದೆ. ಇದು ಇಮ್ಮಡಿ ವಿಕ್ರಮಾದಿತ್ಯನ ಒಡ್ಡೋಲಗದ ದೃಶ್ಯವೆಂದು ಊಹಿಸಲಾಗಿದೆ. ಮಕರತೋರಣದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅಧಿಷ್ಠಾನ ಭಾಗದಲ್ಲಿ ಸಿಂಹ ಮತ್ತು ಆನೆಸವಾರರ ಶಿಲ್ಪಗಳಿವೆ. ಇಲ್ಲಿನ ಮತ್ತೊಂದು ದೇವಾಲಯ ಚಂದ್ರಶೇಖರ ದೇವನದು. ಇದೂ ಪಟ್ಟದಕಲ್ಲಿನ ಪ್ರಾಚೀನ ದೇವಾಲಯ. ಕದಂಬ ರಾಷ್ಟ್ರಕೂಟರ ಕಾಲದ ಸುಂದರ ಚಿತ್ರಣವಿರುವ ಅನುಪಮ ಕಲಾಕೃತಿ ಈ ದೇವಾಲಯ.

೩೨ ಶಾಸನಗಳು ಪಟ್ಟದಕಲ್ಲಿನಲ್ಲಿ ಸುಲಭವಾಗಿ ಕಾಣಸಿಗುತ್ತವೆ. ಉತ್ಖನನಗಳು ನಡೆಯುತ್ತಲೇ ಇರುತ್ತವೆ. ಹೊಸದೊಂದು ಶಾಸನವೋ ಶಿಲ್ಪಕಲಾಕೃತಿಗಳೋ ಇಲ್ಲಿ ಕಾಣಬರುತ್ತಿರುತ್ತವೆ. ಇತಿಹಾಸದ ಮೇಲೆ ಹೊಸದೊಂದು ಬೆಳಕು ಚೆಲ್ಲುವ ಅವಕಾಶ ವಾಸ್ತುಶಿಲ್ಪ ವಿದ್ಯಾರ್ಥಿಗಳಿಗೆ ದೊರಕುತ್ತಿರುತ್ತವೆ.

## ಐಹೊಳೆ


ಪಟ್ಟದಕಲ್ಲಿನಿಂದ ಸುಮಾರು ೩೦ ಕಿ.ಮೀ. ದೂರದಲ್ಲಿದೆ. ಬಾಗಲಕೋಟೆಯಿಂದ ೫೦ ಕಿ.ಮೀ. ದೂರದಲ್ಲಿದೆ. ಐಹೊಳೆ ತಲುಪಲು ರಸ್ತೆ ಸಾರಿಗೆ ಸೌಕರ್ಯವಿದೆ. ಕೇಂದ್ರ ಪುರಾತತ್ವ ಇಲಾಖೆಯ ಕಾರ್ಯಾಲಯವಿಲ್ಲಿದೆ. ಕ್ಷತ್ರಿಯರ ಮಾರಣಹೋಮ ಮಾಡಿದ ನಂತರ ಪರಶುರಾಮ ತನ್ನ ಪರಶುವನ್ನು ಇಲ್ಲಿನ ಮಲಪ್ರಭಾ ನದಿಯಲ್ಲಿ ತೊಳೆದನು. ನದಿಯ ನೀರೆಲ್ಲಾ ಕೆಂಪಾಯಿತು. ಎಂದಿನಂತೆ ನೀರು ತುಂಬಿಕೊಂಡು ಹೋಗಲು ಬಂದ ಆರ್ಯಪುರದ ಮಹಿಳೆಯರು ಕೆಂಪುನೀರನ್ನು ಕಂಡು "ಅಯ್ಯಯ್ಯೋ ಹೊಳೆ" ಎಂದು ಉದ್ಗರಿಸಿದರು. ಆದರಿಂದ ಈ ಊರಿಗೆ ಐಹೊಳೆ ಎಂಬ ಹೆಸರು ಬಂತೆಂದು ಒಂದು ಕತೆ. ಅಗಸ್ತ್ಯರು ವಾತಾಪಿಯನ್ನು ಸಂಹರಿಸಿದಾಗ ಇಲ್ವಲ ತನ್ನ ಮತ್ತು ತನ್ನ ತಮ್ಮನ ನೆನಪಿನಲ್ಲಿ ಇಲ್ಲಿ ಏನಾದರೂ ಅವಶೇಷವಿರಬೇಕೆಂದು ಮುನಿಯನ್ನು ಬೇಡಿದ. ಬಾದಾಮಿಯಲ್ಲಿ ವಾತಾಪಿಯ ಹೆಸರಿನಲ್ಲಿಯೂ ಐಹೊಳೆಯ ದಕ್ಷಿಣಕ್ಕೆ ಇಲ್ವಲನ ಹೆಸರಿನಲ್ಲಿಯೂ ಗುಡ್ಡಗಳು ಉಳಿದಿವೆಯೆಂದೂ ಒಂದು ಐತಿಹ್ಯವಿದೆ. ಅಯ್ಯಗಳು, ಗುರುಗಳು ಈ ಊರಿನಲ್ಲಿ ಅಧಿಕವಾಗಿದ್ದುದರಿಂದ ಆರ್ಯಪುರ ಎಂಬ ಹೆಸರೂ ಈ ಊರಿಗೆ ಬಂದಿದೆ. ಐಹೊಳೆ, ಐಯ್ಯಹೊಳೆ ಎಂಬ ಹೆಸರುಗಳೂ ಸ್ಥಳೀಯರಲ್ಲಿ ಪ್ರಚಾರದಲ್ಲಿವೆ.

೬-೭ ನೆಯ ಶತಮಾನದಲ್ಲಿ ಇಲ್ಲಿ ಜನವಸತಿ ಇತ್ತೆಂದು ಅವಶೇಷಗಳ ಅವಗಾಹನೆಯಿಂದ ತಿಳಿದುಬರುತ್ತದೆ. ಇಲ್ಲಿರುವ ಬೃಹತ್ ಶಿಲಾಸಮಾಧಿಗಳು ಎರಡು ಎಕರೆಗಳಷ್ಟು ಹರಹಿನ ಪ್ರದೇಶವನ್ನೊಳಗೊಂಡಿದೆ. ಚಪ್ಪಡಿಗಳನ್ನು ಪೆಟ್ಟಿಗೆಯಾಕೃತಿಯಲ್ಲಿ ಜೋಡಿಸಿ ಮತ್ತೊಂದು ಚಪ್ಪಡಿಯನ್ನು ಮುಚ್ಚಿರುವ ಈ ಶಿಲಾ ಸಮಾಧಿಗಳು ಮೇಗಟಿಗುಡ್ಡದ ಮೇಲಿವೆ. "ಮಾರೇರ ಅಂಗಡಿ"ಗಳು ಎಂದೇ ಈ ಶಿಲಾಸಮಾಧಿಗಳನ್ನು ಕರೆಯುತ್ತಾರೆ. ಇತ್ತೀಚೆಗೆ ನಡೆಸಿದ ಉತ್ಖನನಗಳಿಂದ ದೊಡ್ಡ ಪ್ರಮಾಣದ ಅಡಿಪಾಯಗಳೂ ಮತ್ತು ಮಡಕೆಗಳೂ ಕಂಡುಬಂದಿವೆ. ಚಾಲುಕ್ಯಪೂರ್ವಕಾಲದಿಂದಲೂ ಇಲ್ಲಿ ಕಟ್ಟಡಗಳಿದ್ದುವೆಂದು ವ್ಯಕ್ತವಾಗುತ್ತದೆ. ಬಾದಾಮಿಯ ಜೊತೆಗೆ ಐಹೊಳೆ ದೊಡ್ಡ ಪಟ್ಟಣವಾಗಿ ಬೆಳೆಯಿತೆಂದು ಶಾಸನಗಳಿಂದ ತಿಳಿಯುತ್ತದೆ. ೭-ನೆಯ ಶತಮಾನದಿಂದಲೇ ಇಲ್ಲಿ ದೇವಾಲಯಗಳ ನಿರ್ಮಾಣವೂ ಆರಂಭವಾಯಿತು. ಚಾಲುಕ್ಯ ರಾಜ್ಯ ಕೊನೆಗೊಂಡಾಗ ಐಹೊಳೆಯ ವೈಭವ ಇಳಿಮುಖವಾಯಿತಾದರೂ ಕಲ್ಯಾಣದ ಚಾಲುಕ್ಯರ ಬೆಳವಣಿಗೆಯಿಂದ ಮತ್ತೆ ಐಹೊಳೆ ಬೆಳೆಯಲಾರಂಭಿಸಿತು.

ಐಹೊಳೆ ವಿದ್ವಾಂಸರಿಂದ ತುಂಬಿದ ಊರಾಗಿತ್ತು. ಶ್ರೀಮಂತರೂ ಇಲ್ಲಿ ಅಧಿಕವಾಗಿದ್ದರೆಂದು ಶಾಸನಗಳು ಹೇಳುತ್ತವೆ. ಶಿಲ್ಪಕಲೆಯ ವೈಭವವನ್ನು ನಾವು ಇಲ್ಲಿಯ ದೇವಾಲಯಗಳಲ್ಲಿ ಕಾಣುತ್ತೇವೆ. ಇಲ್ಲಿ ಸುಮಾರು ೧೨೫ ದೇವಾಲಯಗಳಿವೆ. ಪುರಾತತ್ವ ಇಲಾಖೆಯವರು ಇವುಗಳನ್ನು ೨೨ ಗುಂಪುಗಳಾಗಿ ವಿಂಗಡಿಸಿದ್ದಾರೆ. ಐಹೊಳೆ ಕೋಟೆಯ ಹೊರಗೂ ಒಳಗೂ ಈ ದೇವಾಲಯಗಳು ಹರಡಿಕೊಂಡಿವೆ. ಹಳೆಗನ್ನಡದ ಶಾಸನಗಳು ಕೋಟೆಯ ಮೇಲೆ ಕಾಣಸಿಗುತ್ತವೆ.

ಉಸುಗುಕಲ್ಲನ್ನು ಯಾವ ಬಂಧಕ ಸಾಮಗ್ರಿಯನ್ನೂ ಉಪಯೋಗಿಸದೆ ಒಂದರ ಮೇಲೊಂದರಂತೆ ಪೇರಿಸಿ ಹೊರಗೋಡೆಯನ್ನು ಕಟ್ಟಲಾಗಿದೆ. ಪೂರ್ವಕ್ಕೆ ಹೆಬ್ಬಾಗಿಲಿದೆ. ಸುತ್ತಲೂ ಕಂದಕ. ಇದು ಪ್ರಾಚೀನವಾದ ಕೋಟೆ. ಕೋಟೆಯನ್ನು ಪ್ರವೇಶಿಸುತ್ತಿದ್ದಂತೆ ಕಾಣಸಿಗುವುದು ದುರ್ಗಾಮಾತೆಯ ದೇವಾಲಯ. ಇದರ ವಿನ್ಯಾಸ ಬೌದ್ಧಚೈತ್ಯಾಲಯಗಳಂತಿದೆ. ಇದು ಪೂರ್ವಾಭಿಮುಖವಾಗಿದೆ. ಎರಡೂ ದಿಕ್ಕಿನಿಂದಲೂ ಏರುವ ಪಾವಟಿಗೆಗಳಿವೆ. ಇಡೀ ದೇವಾಲಯ ಆರು ಅಡ್ಡದಿಂಡುಗಳ ಎತ್ತರದ ಅಧಿಷ್ಠಾನದ ಮೇಲಿದೆ. ಕುಳ್ಳ ಕೈಪಿಡಿಯಮೇಲೆ ಅಡ್ಡಕೊಯ್ತದ ಕಂಬಸಾಲುಗಳ ಗರ್ಭಗೃಹವಿದೆ. ಹೊರಗೋಡೆಯಿಂದ ಸರಿದಂತಿರುವ ಗರ್ಭಗೃಹ ಪ್ರದಕ್ಷಿಣೆಗೆ ಅನುಕೂಲವಾಗಿದೆ. ಚತುರಸ್ರಾಕಾರದ ರೇಖಾ ನಾಗರ ಪೀಠ ಗರ್ಭಗುಡಿಯಲ್ಲಿ ಮೇಲ್ಭಾಗದಲ್ಲಿ ಕಾಣಸಿಗುತ್ತದೆ. ಕೈಸಾಲೆಯ ಹಜಾರದ ಹೊರಭಿತ್ತಿಯ ಸುತ್ತಲೂ ದೇವ ಕೋಷ್ಠಗಳಿವೆ. ಒಂದೊಂದು ಕೋಷ್ಠದಲ್ಲೂ ವೃಷಭವಾಹನ ಶಿವ, ಮಹಿಷಮರ್ದಿನಿ, ವಿಷ್ಣು, ನರಸಿಂಹ ಮತ್ತು ವರಾಹ ಮೊದಲಾದ ದೇವಮೂರ್ತಿಗಳಿವೆ. ರಾಮ, ಲಕ್ಷ್ಮಣ, ಸೀತೆಯರನ್ನು ಗುಹನು ನಾವೆಯಲ್ಲಿ ನದಿ ದಾಟಿಸುತ್ತಿರುವ ರಾಮಾಯಣದ ಸನ್ನಿವೇಶಗಳೂ ಚಿತ್ರಿತವಾಗಿವೆ. ನೆಲಗಂಬಗಳ ಮೇಲೆ ಗಂಗಾಯಮುನೆಯರ ಶಿಲ್ಪಗಳಿವೆ. ಇಮ್ಮಡಿ ವಿಕ್ರಮಾದಿತ್ಯನ ಶಾಸನವಿರುವ ಮಂಟಪ ಮಹಾದ್ವಾರದಲ್ಲಿದೆ. ಕಲ್ಯಾಣಿಯೊಂದು ಇಲ್ಲಿಗೆ ಬರುವ ಭಕ್ತಜನರ ಅನುಕೂಲಕ್ಕಾಗಿ ನಿರ್ಮಿತವಾಗಿದೆ.

ಲಾಡಖಾನ್ ಎಂಬ ಮಹಮ್ಮದೀಯ ಸಂತನೊಬ್ಬನು ವಾಸಿಸುತ್ತಿದ್ದುದರಿಂದ ಅವನ ಹೆಸರಿನ ದೇವಾಲಯಗಳ ಗುಂಪೊಂದಿದೆ. ಆದರಲ್ಲಿ ಶಿವಪಾರ್ವತಿಯರ ದೇವಾಲಯಗಳಿವೆ. ಒಂದು ಚಿಕ್ಕ ಗಣಪನ ಮಂದಿರವಿದೆ. ಮೇಲ್ಛಾವಣಿಯ ಮೂರೂ ಪಾರ್ಶ್ವಗಳಲ್ಲೂ ದೊಡ್ಡ ದೊಡ್ಡ ಜಾಲಂಧ್ರಗಳಿವೆ. ಪಶ್ಚಿಮದ ಗೋಡೆಯಲ್ಲಿರುವ ಸೂರ್ಯನ ವಿಗ್ರಹ ತನ್ನತ್ತ ಎಲ್ಲರನ್ನೂ ಸೆಳೆಯುತ್ತದೆ. ೨ ಶಾಸನಗಳು ಇದರ ಪ್ರಾಚೀನತೆಯನ್ನು ಸಾರುತ್ತಿವೆ.



ದುರ್ಗಾ ದೇವಾಲಯ, ಐಹೊಳೆ

ಗೌಡರಗುಡಿಯಲ್ಲಿ ೧೬ ಕಂಬಗಳಿದ್ದು ನಡುವೆ ಕಲ್ಲು ಚಪ್ಪಡಿಗಳನ್ನು ಜೋಡಿಸಲಾಗಿದೆ. ಹಲವು ಕಡೆ ಕಕ್ಷಾಸನಗಳಿವೆ. ಪೂರ್ಣಕುಂಭ ಅಲಂಕರಣವಿರುವ ಗಜಲಕ್ಷ್ಮಿಯ ವಿಗ್ರಹವಿದೆ. ಆಕೆಗೆ ಆನೆಗಳು ಎರಡೂ ಪಕ್ಕದಲ್ಲೂ ನಿಂತು ಅಭಿಷೇಕ ಮಾಡುತ್ತಿರುವ ದೃಶ್ಯ ಕ್ಷಣ ಹೊತ್ತು ಪ್ರೇಕ್ಷಕರನ್ನು ತನ್ನತ್ತ ಸೆಳೆಯುತ್ತದೆ. ಸೂರ್ಯನಾರಾಯಣ ಗುಡಿಯಲ್ಲಿರುವ ಹಸಿರು ಮೋಡಿ ಕಲ್ಲಿನ ೨ ಮೀಟರ್ ಎತ್ತರವಿರುವ ಸೂರ್ಯದೇವನ ವಿಗ್ರಹ ವಿಶಿಷ್ಟವಾಗಿದೆ. ಗರ್ಭಗುಡಿಯ ಒಳಗೆ ನಾಲ್ಕು ಕಂಬಗಳಿವೆ. ನಾಗರಬಾಲ ಹಿಡಿದು ನಿಂತಿರುವ ಗರುಡ ವಿಗ್ರಹವಿದೆ. ಗಂಗಾ ಯಮುನಾ ಮತ್ತು ದ್ವಿಬಾಹು ಕಪಾಲಪಾಣಿಯಾದ ಸೂರ್ಯನ ಶಿಲ್ಪವಿದೆ. ಪದ್ಮಾಸನಾಸೀನನಾದ ಶಿವಮೂರ್ತಿ ಧ್ಯಾನಾಸಕ್ತನಾಗಿರುವುದು ಚಿತ್ತಾಕರ್ಷಕವಾಗಿದೆ. ಬಡಿಗೇರ ಗುಡಿಯು ಮೂಲತಃ ಮತ್ತೊಂದು ಸೂರ್ಯ ದೇವಾಲಯ. ಕಂಬದ ಮೇಲೆ ದಕ್ಷಬ್ರಹ್ಮ ಮತ್ತು ತ್ರಿಶೂಲ ರೀತಿಯ ಕಿರೀಟಧಾರಿ ಕುಬ್ಜರ ವಿಗ್ರಹವಿದೆ. ರಾಚಿಗುಡಿ ಎಂಬುದು ತ್ರಿಕೂಟಾಚಲ ಶಿವಾಲಯ. ಸುತ್ತಲೂ ಕಕ್ಷಾಸನವಿದ್ದು ಅದರ ಮೇಲೆ ಕಂಬಗಳಿವೆ. ಮಂಟಪದ ನಡುವೆ ನಂದಿಯಿದೆ. ಗುಡಿಯ ಹೊರಗೋಡೆಗಳ ಮೇಲೆ ಜಾಲಂಧ್ರಗಳ ಚಿಕ್ಕಕೋಷ್ಠಗಳಿವೆ. ಅವುಗಳಲ್ಲಿ ವಿಷ್ಣು, ನಟರಾಜ, ಭೈರವ ಮತ್ತು ಗಣಪತಿಯ ವಿಗ್ರಹಗಳಿವೆ.

ಕೊಂತಿಗುಡಿ ಗುಂಪು ಎಂಬುದು ನಾಲ್ಕು ದೇವಾಲಯಗಳ ಒಂದು ಗುಂಪು. ಮೊದಲನೆಯದರಲ್ಲಿ ಕಮಲಾಸೀನ ಬ್ರಹ್ಮ, ಅನಂತಶಾಯಿ ವಿಷ್ಣು ಮತ್ತು ಉಮಾಮಹೇಶ್ವರರ ಶಿಲ್ಪಗಳಿವೆ. ದಕ್ಷಿಣಗೋಡೆಯ ಮೇಲೆ ಶಿವತಾಂಡವ ಮೂರ್ತಿ, ಇಕ್ಕೆಲದಲ್ಲೂ ಶೈವ ದ್ವಾರಪಾಲಕರ ವಿಗ್ರಹಗಳಿವೆ. ಎರಡನೆಯ ಗುಡಿಯಲ್ಲಿ ಉಮಾಮಹೇಶ್ವರ ಮತ್ತು ಸೂರ್ಯನಾರಾಯಣರ ವಿಗ್ರಹಗಳಿವೆ. ಮಹಿಷಮರ್ದಿನಿಯ ಶಿಲ್ಪ, ಗಜ, ವೃಷಭ, ವರಾಹ ಮತ್ತು ಎರಡೇ ಕಾಲುಗಳಲ್ಲಿರುವ ಮೂವರು ಸ್ತ್ರೀಯರ ಸಂಯುಕ್ತ ಶಿಲ್ಪಗಳಿವೆ. ಮಲ್ಲಿಕಾರ್ಜುನ ಗುಡಿಯ ಗುಂಪಿನಲ್ಲಿ ಮಲ್ಲಿಕಾರ್ಜುನ ಗುಡಿಯೇ ದೊಡ್ಡದು. ಈ ಗುಡಿಯ ಬಳಿ ಅಂತರಗಂಗೆ ಎಂಬ ಹೊಂಡವಿದೆ. ಗರ್ಭಗುಡಿಯ ಮೇಲೆ ಕದಂಬ ನಾಗರ ಶೈಲಿಯ ಶಿಖರವಿದೆ. ಸಿಂಹಮುಖದಿಂದ ಹೊರಟ ಮಣಿಸರಗಳು ವರ್ತುಲಾಕಾರದಲ್ಲಿದ್ದು ನಡುವೆ ಇರುವ ನೃಸಿಂಹಮೂರ್ತಿ ವಿಶಿಷ್ಟವಾಗಿದೆ. ಗಳಗನಾಥ ಗುಡಿಗಳ ಗುಂಪಿನಲ್ಲಿ ೩೮ ಗುಡಿಗಳಿವೆ. ಗರ್ಭಗುಡಿಯಲ್ಲಿ ಸಪ್ತಮಾತೃಕೆಯರ ಕಲ್ಲುಪಟ್ಟಿಕೆ ಇದೆ. ಶ್ರೇಣೀಕೃತ ಗುಡಿಗಳ ಗುಂಪಿನಲ್ಲಿ ೮ ದೇವಾಲಯಗಳಿವೆ. ಮುಂಭಾಗದಲ್ಲಿ ಸಿಂಹ ಮತ್ತು ತ್ರಿಮೂರ್ತಿಗಳನ್ನು ಕೆತ್ತಿದ್ದಾರೆ. ರಾಮಲಿಂಗಗುಡಿಗಳ ಸಮೂಹದಲ್ಲಿ ರಾಮಲಿಂಗದೇವಾಲಯ ಮುಖ್ಯವಾದುದು. ಇಲ್ಲಿ ಸಿದ್ಧೇಶ್ವರನ ಲಿಂಗವೂ ಇದೆ. ಗರ್ಭಗುಡಿಯಲ್ಲಿ ವಿಷ್ಣುವಿಗ್ರಹವೂ ಆವಾರದಲ್ಲಿ ಮಹಿಷಮರ್ದಿನಿ ಮತ್ತು ಗಣಪತಿ ವಿಗ್ರಹಗಳೂ ಇವೆ. ಬ್ರಹ್ಮನ ದೇವಾಲಯ ಇಲ್ಲಿರುವುದೊಂದು ವೈಶಿಷ್ಟ್ಯ. ಗುಡಿಯಿಂದ ನದಿಯವರೆಗೂ ತಲುಪಲು ಮೆಟ್ಟಿಲುಗಳಿವೆ.

ಚರಂತಿ ಎಂಬ ಜೈನಗುಡಿಗಳ ಗುಂಪಿನ ಪ್ರವೇಶದ್ವಾರದಲ್ಲಿ ತೀರ್ಥಂಕರ ಮತ್ತು ಗಂಧರ್ವರ ವಿಗ್ರಹಗಳಿವೆ. ಒಟ್ಟು ೨೪ ತೀರ್ಥಂಕರರನ್ನು ಅವಳಿ ಬಸದಿಯಲ್ಲಿ ಕೆತ್ತಲಾಗಿದೆ. ಗರ್ಭಗುಡಿಯಲ್ಲಿ ಜಿನಮೂರ್ತಿಯನ್ನು ಕಡೆಯಲಾಗಿದೆ. ಜೈನಗುಡಿಗಳ ಗುಂಪೊಂದರಲ್ಲಿ ಜೈನ ನಾರಾಯಣ ಅಥವಾ ಯೋಗಿ ನಾರಾಯಣ ಎಂಬ ವಿಗ್ರಹಗಳಿವೆ. ಗಂಡವಿಮುಕ್ತ ಭಟ್ಟಾರಕನೆಂಬ ಜೈನ ಯತಿಯ ಶಾಸನವಿದೆ. ಮಧ್ಯದ ಗುಡಿಯಲ್ಲಿ ಪಾರ್ಶ್ವನಾಥನ ವಿಗ್ರಹವಿದೆ.

ಗುಡ್ಡದ ಮೇಲಿನ ಗುಡಿಗಳು ಬೌದ್ಧಾಲಯಗಳೆಂದು ಹೆಸರು ಪಡೆದಿವೆ. ಇಲ್ಲಿಯ ದೇವಾಲಯವೊಂದರಲ್ಲಿ ಪದ್ಮಾಸನಸ್ಥನಾದ ಬುದ್ಧಮೂರ್ತಿ ಕೆಳ ಗರ್ಭಗುಡಿಯಲ್ಲಿದೆ. ಇದು ಚೈತ್ಯಗೃಹವೆಂದೂ ಕೆಲವರ ಮತ. ವಸ್ತ್ರಧಾರಿ ಜಿನವಿಗ್ರಹವನ್ನೂ ಇಲ್ಲಿ ಕಾಣಬಹುದು. ಸಿಂಹಾಸನದಲ್ಲಿ ಕುಳಿತ ತೀರ್ಥಂಕರರ ವಿಗ್ರಹ ಗರ್ಭಗುಡಿಯಲ್ಲಿದೆ. ಪ್ರದಕ್ಷಿಣಾ ಪಥದಲ್ಲಿ ಜೈನ ಯಕ್ಷಿಣಿಯ ಶಿಲ್ಪವಿದೆ. ಬೌದ್ಧ ಜೈನ ಶಿಲ್ಪಗಳ ಸಂಗಮ ಈ ದೇವಾಲಯ. ಜೈನ ಗುಹಾ ದೇವಾಲಯವೂ ಇಲ್ಲಿದೆ. ಆಳೆತ್ತರದ ಗೊಮ್ಮಟನ ಮೂರ್ತಿ ಇಲ್ಲಿದೆ. ಗೊಮ್ಮಟನ ಇಕ್ಕೆಲದಲ್ಲೂ ಅವನ ಸೋದರಿಯರಾದ 'ಬ್ರಾಹ್ಮೀ' ಮತ್ತು 'ಸುಂದರಿ' ಎಂಬುವರು ಅವನ ಮೈಗಂಟಿರುವ ಮಾಧವೀ ಲತೆಯನ್ನು ಬಿಡಿಸುತ್ತಿರುವ ಶಿಲ್ಪ ಸುಂದರವಾಗಿದೆ. ಎದಿರು ಗೋಡೆಯಲ್ಲಿ ಕಾಯೋತ್ಸರ್ಗ ಭಂಗಿಯಲ್ಲಿರುವ ಸುಪಾರ್ಶ್ವನಾಥನ ವಿಗ್ರಹವಿದೆ.

ಐಹೊಳೆಯಲ್ಲಿ ಫಾಲ್ಗುಣಮಾಸದಲ್ಲಿ ಜಾತ್ರೆ ನಡೆಯುತ್ತದೆ. ಇಲ್ಲಿನ ನೂರಾರು ಶಿಲ್ಪಗಳು ಕಲಾಪ್ರೇಮಿಗಳಿಗೆ ಪ್ರಮುಖ ಆಕರ್ಷಣೆಯಾಗಿವೆ. ಈ ದೇವಾಲಯಗಳ ಉಗಮ ಮತ್ತು ವಿಕಾಸಗಳ ಬಗ್ಗೆ ಬೆಳಕು ಚೆಲ್ಲುವಂಥ ಶಾಸನಗಳೂ ಇಲ್ಲಿ ಹೇರಳವಾಗಿವೆ. ಹಿಂದೂ, ಬೌದ್ಧ, ಜೈನ ಧರ್ಮಗಳ ಸಂಗಮ ಮಾತ್ರವೇ ಅಲ್ಲದೆ ಮಹಮ್ಮದೀಯ ಸಂತರೂ ಕ್ರಿಶ್ಚಿಯನ್ ಸಾಧುಗಳೂ ಇಲ್ಲಿ ಬೀಡುಬಿಟ್ಟಿರುವುದರಿಂದ ವಿಶ್ವಧರ್ಮವೇ ಇಲ್ಲಿ ಸಮ್ಮಿಲನವಾಗಿದೆ ಎಂದರೂ ಅತಿಶಯೋಕ್ತಿಯಲ್ಲ. ◆